ಜನರಿದ್ದಾರೆ. ಇದರ ಬಗ್ಗೆ ನೀವೇನಾದರೂ ಗಮನ ಕೊಡುತ್ತೀರಾ. ಮಾಮೂಲಿ ಉತ್ತರ ಬೇಡ. ಇದರ ಬಗ್ಗೆ ಇಲ್ಲಿಯವರೆಗೆ ಏನು ಪ್ರಯತ್ನವಾಗಿದೆ ಅದನ್ನು ತಿಳಿಸಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಬೇರೆ ಕಟ್ಟಡಗಳನ್ನು ಉಪಯೋಗಿಸುತ್ತಿದ್ದಾರೆ. ಈ ಕಾಲೇಜಿಗೆ ಇರುವಂತಹ ಜಾಗ ಈಗ ಬಗರ್ ಹುಕುಂ ಸಾಗುವಳಿಯಲ್ಲಿದೆ. ಅದನ್ನು ತಪ್ಪಿಸಿ ಆ ಜಮೀನನ್ನು ಕೊಡಬೇಕಾದ ವ್ಯವಸ್ಥೆಯ ಬಗ್ಗೆ ಮುಂದಿನ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತೇವೆ. ಮತ್ತೆ ಉಪಾಧ್ಯಾಯರನ್ನು ಈ ವರ್ಷದಲ್ಲಿ ನೇಮಕ ಮಾಡುತ್ತೇವೆ. ಅವರಿಗೆ ಎಷ್ಟು ಜನ ಉಪಾಧ್ಯಾಯರುಗಳು ಯಾವ್ಯಾವ ವಿಷಯಕ್ಕೆ ಸಂಬಂಧಪಟ್ಟವರಿದ್ದಾರೆ. ಅವರನ್ನು ನೇಮಕ ಮಾಡುವುದಕ್ಕಾಗಲೀ, ಕಟ್ಟಡವನ್ನು ತೆಗೆದುಕೊಳ್ಳುವುದಕ್ಕಾಗಲೀ ಸರ್ವ ಪ್ರಯತ್ನ ಮಾಡಿ ಆ ಕೆಲಸವನ್ನು ಪೂರೈಸುತ್ತೇವೆಂದು ಭರವಸೆಯನ್ನು ಕೊಡಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರನ್ನು ತಪ್ಪಿಸಿಕೊಡುತ್ತೇವೆಂದು ಹೇಳಿದರು. ಅವರ ಜೀವನಕ್ಕೇನಾದರೂ ಬೇರೆ ಯೋಚನೆ ಮಾಡಿದ್ದೀರಾ ? ಅವರು ನಿರ್ಗತಿಕರು. ಅವರು ಪುಟ್‌ಪಾತಿಗೆ ಬಂದು ಬೀಳಬೇಕೇ ? ಅವರಿಗೇನಾದರೂ ಹಣ ಕೊಡುತ್ತೀರಾ ? ಅಗ್ರಿಕಲ್ಚರ್ ಕಾಲೇಜಿನಲ್ಲಿ ಕೆಲಸ ಕೊಡುತ್ತೀರಾ. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರು ನೂರಾರು ಜನರಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ನಮ್ಮ ಸ್ನೇಹಿತರಿಗೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಮಾಡಿಕೊಡಬೇಕೆಂಬ ಉದ್ದೇಶ ಇದೆಯೇ ಅಥವಾ ಆ ಜಾಗವನ್ನು ಕಟ್ಟಡ ಕಟ್ಟುವುದಕ್ಕೆ ತೆಗೆದುಕೊಳ್ಳಬೇಕೆಂಬ ಉದ್ದೇಶವೇ ? ಬಗರ್ ಹುಕುಂ ಸಾಗುವಳಿಗೆ ತಪ್ಪಿಸಬೇಕಾದರೆ ಯಾವ ರೀತಿ ಪರಿಹಾರ ಕೊಡಬೇಕು ಎನ್ನುವ ಬಗ್ಗೆ ಸ್ಪಷ್ಟವಾದ ಕಾನೂನಿದೆ. ಅದರಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಭತ್ತ, ರಾಗಿ ಬೆಳೆಗಳಿಗೆ ಸಾಂಕ್ರಾಮಿಕ ರೋಗ.

442. ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಭತ್ತ ರಾಗಿ ಹಾಗೂ ಇತರೆ ಬೆಳೆಗಳು ನಂಜುರೋಗದ ಹಾವಳಿಯಿಂದ ನಾಶವಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರ ಈ ವಿಷಯದಲ್ಲಿ ಕ್ರಮ ಕೈಗೊಂಡಿದೆಯೇ ?

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಲ್ಲಾ ಬೆಳೆಯೂ ನಾಶವಾಗಿರುವುದು, ಕೃಷಿ ಇಲಾಖೆಯ ನಿರ್ಲಕ್ಷ್ಯತನ ಎಂದು ಹೇಳುವುದು ನಿಜವೇ ?

ಈ) ಹಾಗಿದ್ದಲ್ಲಿ, ಸರ್ಕಾರ ರೈತರ ನಷ್ಟ ಪರಿಹಾರಕ್ಕೆ ಏನು ಕ್ರಮ ಕೈಗೊಂಡಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಬೆಳೆಗೂ ನಂಜುರೋಗದ ಹಾವಳಿ ಕಂಡು

ಬಂದಿರುವುದಿಲ್ಲ. ಆದರೆ ಹವಾಮಾನದ ವ್ಯತ್ಯಾಸದಿಂದ ಕಂದು ಜಿಗಿ ಹುಳುವಿನ ವೃದ್ಧಿ ಜಾಸ್ತಿಯಾಗಿ ಭತ್ತದ ಬೆಳೆಗೆ ಸುಮಾರು 150 ಹೆಕ್ಟೇರ್ ಪ್ರದೇಶದಲ್ಲಿ ಕಂದು ಜಿಗಿ ಹುಳುವಿನ ಬಾಧೆ ಕಂಡುಬಂದಿದೆ. ಇದರ ಹಾವಳಿ ತಡೆಗಟ್ಟಲು ಎಲ್ಲಾ ತರಹದ ಕ್ರಮಗಳನ್ನು ಹಾಗೂ ಸೂಕ್ತ ನಿವಾರಣೆ ಸಲಹೆಗಳನ್ನು ಸೂಕ್ತ ಸಮಯದಲ್ಲಿ ಕೊಡಲು ಕ್ರಮಗಳನ್ನು ಕೃಷಿ ಇಲಾಖೆಯು ತೆಗೆದುಕೊಂಡಿದೆ. ಆದುದರಿಂದ ಕೃಷಿ ಇಲಾಖೆ ನಿರ್ಲಕ್ಷ್ಯತನ ಎಂದು ತಿಳಿಸಿರುವುದು ಸರಿಯಲ್ಲ.

ಈ) ರೈತರಿಗೆ ಪರಿಹಾರ ಕೊಡುವ ಯೋಜನೆ ಇರುವುದಿಲ್ಲ., ಆದರೆ, ಕೃಷಿ ಇಲಾಖೆ ವತಿಯಿಂದ ಚನ್ನಪಟ್ಟಣ ತಾಲ್ಲೂಕಿನ ರೈತರಿಗೆ ರಿಯಾಯಿತಿ ದರದಲ್ಲಿ ಕೀಟನಾಶಕಗಳನ್ನು ಸರಬರಾಜು ಮಾಡಲು ರೂ. 2,500–00ಗಳನ್ನು ಒದಗಿಸಲಾಗಿದೆ.

12.40. ಪಿ.ಎಂ.

ಶ್ರೀ ಸಾದತ್ ಆಲಿಖಾನ್:– ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ Whether it has come to the notice of the Government that the paddy and Ragi and other crops are destroyed in most of the Districts in the State due to the viral infection to the crops ಎಂದು. ಅದಕ್ಕೆ ಉತ್ತರ 'ಇಲ್ಲ' ಎಂದು ಕೊಟ್ಟಿದ್ದಾರೆ. ಇನ್ನೊಂದು ಪ್ರಶ್ನೆ Whether it is a fact due to the negligency of the Agricultural Department the entire crops are destroyed in Channapatna Taluk.

ಉಪಾಧ್ಯಕ್ಷಿಣಿಯವರು:– ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಸಾದತ್ ಆಲಿಖಾನ್:– ನನಗೆ ಈಗ ಇನ್‌ಫರ್‌ಮೇಷನ್ ಬಂದಿದೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ವಯರಲ್ ಇನ್‌ಫೆಕ್ಷನ್ ಎಂದು ಉತ್ತರ ಕೊಟ್ಟಿದ್ದಾರೆ. ಈಗ ತಮ್ಮ ಡಿಪಾರ್ಟ್‌ಮೆಂಟ್‌ನವರು, ಸೆಕ್ರೆಟರಿಯೇಟ್‌ನಿಂದ ಏನು ಬಂದಿದೆ ಎಂದರೆ ಅದಾವುದೋ ಬ್ರೌಮ್ಲಾಂಟ್ ಹಾಪರ್ ಎಂದೂ, ಸೀಸನಲ್ ಡಿಸೀಸ್ ಎಂದು ಬಂದಿದೆ. ಇದು ಮೊದಲಬಾರಿಗೆ ಚನ್ನಪಟ್ಟಣ ತಾಲ್ಲೂಕಿಗೆ ಬಂದಿರುವುದು. ಈ ರೀತಿಯಾಗಿ ಇಲ್ಲಿಯವರೆಗೆ ಬಂದಿಲ್ಲ. ಮತ್ತೊಂದು ವಿಷಯವೇನೆಂದರೆ ಅಲ್ಲಿ ಕ್ರಾಪ್ ಆಗಿದೆ, ವೆಟ್‌ಕ್ರಾಪ್ 10 ಪರ್ಸೆಂಟ್. ಈ ಹತ್ತು ಪರ್ಸೆಂಟ್‌ನಲ್ಲಿ ಟೋಟಲ್ 100 ಪರ್ಸೆಂಟ್ ಲಾಸ್ ಆಗಿದೆ. Either it is due to viral infection or plant hopper or seasonal disease. ಬಂದಿದೆ ಅಲ್ಲಿ 100 ಪರ್ಸೆಂಟ್ ಹುಲ್ಲು ಕೂಡ ಬರಲಿಲ್ಲ. ಅದಕ್ಕೆ ನಾನು ಏನು ಹೇಳಿದ್ದೇನೆಂದರೆ ಕಾಂಪೆನ್‌ಸೇಷನ್ ಪ್ರಾವಿಷನ್ ಮಾಡದಿದ್ದರೆ ಕಾಂಪೆನ್‌ಸೆಷನ್ ಕೊಡುವಂಥ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಇದು ವೈರಲ್ ಇನ್‌ಫೆಕ್ಷನ್ ಆದುದರಿಂದ ಹರಡುವುದಕ್ಕೆ ಸಾಧ್ಯತೆ ಇದೆ. ಆದರೆ, ರಾಗಿ ಪೈರಿಗೆ ಬಂದಿಲ್ಲವೆಂದು ಸ್ಪಷ್ಟವಾಗಿ ಪರಿಣತರಿಂದ ಅಭಿಪ್ರಾಯ ಬಂದಿದೆ. ಜೊತೆಗೆ ಇದು ಎಷ್ಟೆಂದರೆ ಕೇವಲ 154 ಎಕರೆ ಪ್ರದೇಶದಲ್ಲಿ ಭತ್ತದ ಬೆಳೆಗೆ ಮಾತ್ರ ಬಂದು ತೊಂದರೆಯಾಗಿದೆ. ಬೇರೆ ಯಾವ ಬೆಳೆಗೂ ಹಾನಿಯಾಗಿಲ್ಲ. ಆದ್ದರಿಂದ ಇದಕ್ಕೆ ಯಾವ ರೀತಿ ಪರಿಹಾರ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಸರಕಾರ ಯೋಚನೆ ಮಾಡಿ ಅವರಿಗೆ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ.